# ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ (ಸಿಸಿಹೆಚ್-1) ರವರ ನ್ಯಾಯಾಂಗಣದಲ್ಲಿ

## ಎಸ್.ಸಿ. ಸಂಖ್ಯೆಃ 745/2020

ಚಾ.ಸಾ-1 ಪ್ರಾ.ಸಾ- 1

ದಿಃ 19.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

| | |
|---|---|
| ಹೆಸರು | ಎಸ್.ಎನ್.ಬಸವರಾಜಯ್ಯ |
| ತಂದೆ ಹೆಸರು | ಲೇಟ್ ನರಸಿಂಹಯ್ಯ |
| ವಯಸ್ಸು | 64 ವರ್ಷ |
| ವೃತ್ತಿ | ನಿವೃತ್ತ ಪಿ.ಎಸ್.ಐ |
| ವಿಳಾಸ | ಬೆಂಗಳೂರು |

ಮುಖ್ಯವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ

ನಾನು 2016 ರಿಂದ ಮೇ 2022 ರವರೆಗೆ ಕೆ.ಪಿ.ಅಗ್ರಹಾರ ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿಃ 16.9.2019 ರಂದು ನಾನು ರಾತ್ರಿ ಕರ್ತವ್ಯಕ್ಕಾಗಿ ಠಾಣೆಗೆ ಹಾಜರಾಗಿದ್ದೆ ಮತ್ತು ಎಸ್.ಹೆಚ್.ಒ ರವರು ನನ್ನನ್ನು ಹಾಗು ಚಾ.ಸಾ-4 ರಿಂದ 8 ರವರನ್ನು ನಮ್ಮ ಠಾಣಾ ಸರಹದ್ದಿನ ಗಸ್ತು ಕರ್ತವ್ಯಕ್ಕೆ ನೇಮಿಸಿದ್ದರು. ಅದರಂತೆ ನಾವು ಗಸ್ತು ಮಾಡುತ್ತಿದ್ದೆವು. ಮರುದಿನ ದಿಃ 17.9.2019 ರಂದು ಬೆಳಗಿನ ಜಾವ 3.30ರ ವೇಳೆಗೆ ನಾವು ಗಸ್ತು ಮಾಡುತ್ತಿದ್ದಾಗ ನನಗೆ ನಮ್ಮ ಬಾತ್ಮಿದಾರರಿಂದ ಬಂದ ಮಾಹಿತಿ - ಟೆಲಿಕಾಂ ಲೇಔಟ್ ನ ಗೋಪಾಲನ್

ರೆಸಿಡೆನ್ಸಿ ಪಕ್ಕದ ಖಾಲಿ ನಿವೇಶನಗಳಲ್ಲಿ 5-6 ಜನ ಆಸಾಮಿಗಳು ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಸಾರ್ವಜನಿಕರನ್ನು ದೋಚಲು ಹೊಂಚುಹಾಕುತ್ತಿದ್ದಾರೆ ಎಂಬ ಮಾಹಿತಿ ಬಂದಿತ್ತು.

3. ನಾನು ಚಾ.ಸಾ-2 ಮತ್ತು 3 ಪಂಚರನ್ನು ನೋಟೀಸ್ ನೀಡಿ ಬರಮಾಡಿಕೊಂಡು, ನಮ್ಮ ಸಿಬ್ಬಂದಿ ಜೊತೆಯಲ್ಲಿ ಬೆಳಗಿನ ಜಾವ 4 ಗಂಟೆ ಸುಮಾರಿಗೆ ಸದರಿ ಸ್ಥಳಕ್ಕೆ ಹೋಗಿ ಬಾತ್ಮಿಯನ್ನು ಖಚಿತಪಡಿಸಿಕೊಂಡೆವು. ನಾವು ಏಕಕಾಲಕ್ಕೆ ಸದರಿ ಸ್ಥಳದಲ್ಲಿ ದಾಳಿ ಮಾಡಿದಾಗ ಇಬ್ಬರು ಮಾತ್ರ ಸೆರೆಸಿಕ್ಕಿದರು ಮತ್ತು ಮೂವರು ಆಸಾಮಿಗಳು ಸ್ಥಳದಿಂದ ಓಡಿಹೋದರು. ಸ್ಥಳದಲ್ಲಿ ಸಿಕ್ಕವರನ್ನು ವಿಚಾರಿಸಲಾಗಿ ಅವರು ಎ-1 ಮತ್ತು ಎ-2 ಎಂದು ಇರುತ್ತಾರೆ ಹಾಗು ಓಡಿಹೋದವರು ಎ-3 ರಿಂದ ಎ-5 ರವರು ಇರುತ್ತಾರೆ.

4. ಎ-1 ರವರಿಂದ ದೊಣ್ಣೆ ಮತ್ತು ಎ-2 ರವರಿಂದ ಖಾರದಪುಡಿ ಪೊಟ್ಟಣ ಮತ್ತು ಚಾಕು ಸಿಕ್ಕಿರುತ್ತದೆ. ನಾನು ಸ್ಥಳದಲ್ಲೆ ಪಂಚರ ಸಮಕ್ಷಮ ಬೀದಿ ದೀಪದ ಕೆಳಗೆ ಬೆಳಗಿನ ಜಾವ 4.30ರಿಂದ 5.30 ರವರೆಗೆ ಅಮಾನತು ಪಂಚನಾಮೆ ಕ್ರಮ ಜರುಗಿಸಿ ಒಟ್ಟು ನಾಲ್ಕು ದೊಣ್ಣೆ, ಒಂದು ಚಾಕು ಮತ್ತು ಒಂದು ಖಾರದಪುಡಿ ಪೊಟ್ಟಣವನ್ನು ವಶಪಡಿಸಿಕೊಂಡಿರುತ್ತೇನೆ. ಸದರಿ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. (ಈ ಹಂತದಲ್ಲಿ ಸೀಲು ಮಾಡಲಾದ ವಸ್ತುಗಳನ್ನು ತೆರೆಯಲಾಯಿತು.) ಸಾಕ್ಷಿಯು ಸದರಿ ವಸ್ತುಗಳನ್ನು ಗುರುತಿಸಿದ ಮೇರೆಗೆ ಅವುಗಳನ್ನು ಕ್ರಮವಾಗಿ ಮು.ಮಾ-1 ರಿಂದ 6 ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು,

ಅದನ್ನು ನಿ.ಪಿ-1 ಎಂದು ಹಾಗು ನನ್ನ ರುಜುವನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು.

5. ನಾವೆಲ್ಲರೂ 1 ಮತ್ತು 2ನೇ ಆರೋಪಿತರೊಂದಿಗೆ ಹಾಗು ಮು.ಮಾ-1 ರಿಂದ 6 ವಸ್ತುಗಳೊಂದಿಗೆ ಠಾಣೆಗೆ ಹಿಂದಿರುಗಿ, ಚಾ.ಸಾ-9 ರವರ ಮುಂದೆ ಹಾಜರುಪಡಿಸಿ, ಒಂದು ವರದಿ ನೀಡಿರುತ್ತೇನೆ. ಈಗ ಸದರಿ ವರದಿಯನ್ನು ನೋಡುತ್ತಿದ್ದು, ಅದನ್ನು ನಿ.ಪಿ-2 ಎಂದು ಹಾಗು ನನ್ನ ರುಜುವನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

<u>ಪಾಟಿಸವಾಲುಃ ಶ್ರೀಮತಿ ಕೆ.ಕೆ.ಎಲ್., 5ನೇ ಆರೋಪಿ ಪರ ವಕೀಲರಿಂದಃ</u>

6. ನಾನು ಮೇಲೆ ಹೇಳಿದಂತೆ ಸದರಿ ದಿನದಂದು ನನಗೆ ಯಾವುದೇ ಮಾಹಿತಿ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಸದರಿ ಸ್ಥಳದಲ್ಲಿ ಯಾವುದೇ ಆರೋಪಿತರು ಇದ್ದಿರಲಿಲ್ಲ ಮತ್ತು ಅವರಿಂದ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ನಿ.ಪಿ-1 ರಂತೆ ಪಂಚನಾಮೆ ಮಾಡಿರುವುದಿಲ್ಲ ಹಾಗು ಮು.ಮಾ-1 ರಿಂದ 6 ರಂತೆ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣಾ ಅಂಕಿ ಅಂಶಗಳಿಗೋಸ್ಕರ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಉಳಿದ ಆರೋಪಿ ಪರ ವಕೀಲರು ಮೇಲಿನ ಪಾಟಿಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಎಂ. ಚಂದ್ರಶೇಖರ್ ರೆಡ್ಡಿ )
ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.